ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 20.09.2022

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

(ದಿನಾಂಕ **21-07-2022** ರಿಂದ **25-09-2022** ವರೆಗೆ)

| ನಿಯತಾಂಕಗಳು | 21.9.2022 | 22.9.2022 | 23.9.2022 | 24.9.2022 | 25.9.2022 |
|---|---|---|---|---|---|
| ಮಳೆ (ಮಿ ಮಿ) | 1 | 1 | 0 | 0 | 1 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 28 | 29 | 30 | 29 | 30 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 20 | 20 | 20 | 20 |
| ಮೋಡ (ಪ್ರಮಾಣ) | 6 | 6 | 5 | 5 | 6 |
| ಅರ್ದ್ರತೆ 7.20 ಬೆ (ಶೇ) | 82 | 80 | 80 | 80 | 82 |
| ಅರ್ದ್ರತೆ 2.20 ಮ (ಶೇ) | 58 | 56 | 56 | 56 | 58 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 6 | 6 | 6 | 5 | 5 |
| ಗಾಳಿಯ ದಿಕ್ಕು ( ಡಿಗ್ರಿ) | 292 | 292 | 292 | 291 | 292 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾದ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **28.0-30.0°C** ಮತ್ತು ಕನಿಷ್ಠ **20.0°C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **80-82 %** ಇದ್ದು ಮಧ್ಯಾಹ್ನ **56-58 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-6** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

**"ಉತ್ತರಿ ಮಳೆ ಇಲ್ಲದೆ, ಇನ್ನ್ಯಾತರ ಮಳೆ!"**

- ಉತ್ತರ ನಕ್ಷತ್ರದ ಮಳೆಯ ಕಾಲವು ಸೆಪ್ಟೆಂಬರ್ ತಿಂಗಳ 13 ರಿಂದ ಸೆಪ್ಟೆಂಬರ್ 26 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 91.9 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ ಸಲಹೆಗಳು | | 1. ರಾಗಿ ಬೆಳೆಗಳಲ್ಲಿ ಕಳೆಗಳ ಸಮಸ್ಯೆ ಹೆಚ್ಚಾಗಿರುತ್ತದೆ ಇದರ ನಿರ್ಮೂಲನೆಗೆ ಕುಂಟೆ ಹಾಯಿಸುವ ಮುಖಾಂತರ ಕಳೆ ನಿರ್ಮೂಲನೆ ಮಾಡಿ ಶಿಫಾರಿಸ್ಸಿದ ಮೇಲು ಗೊಬ್ಬರವನ್ನು ಕೊಡಿ.<br>2. ರಾಗಿ ಬಿತ್ತನೆಯಾಗಿರುವ ಕಡೆಗಳಲ್ಲಿ ಎಲ್ಲೆಲ್ಲಿ ಖಾಲಿ ಇರುವ ಜಾಗಗಳಲ್ಲಿ ರಾಗಿ ಗಿಡಗಳನ್ನು ನಾಟಿ ಮಾಡಿ ಇದರಿಂದ ಗಿಡಗಳ ಸಂಖ್ಯೆಯನ್ನು ಕಾಪಾಡಿಕೊಳ್ಳಬಹುದು ಹಾಗು ತೆಂಡೆ ಹೊಡೆಯಲು ಸಹಾಯವಾಗುತ್ತದೆ ಮತ್ತು ಉತ್ತಮ ಇಳುವರಿಯನ್ನು ಪಡೆಯಬಹುದು.<br>3. ಈಗಾಗಲೇ ಬಿತ್ತನೆಯಾಗಿರುವ ತೊಗರಿ ಬೆಳೆಯಲ್ಲಿ ಅಂತರ ಬೇಸಾಯ ಮಾಡಿ ಶಿಫಾರಿಸ್ಸಿದ ಮೇಲು ಗೊಬ್ಬರವನ್ನು ಕೊಡಿ. |
| ಮುಂಗಾರು ಬೆಳೆಗಳು | ಬೆಳವಣಿಗೆ ಹಂತ | **ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತಡವಾದ ಮುಂಗಾರು ಬೆಳೆಗಳಾದ ರಾಗಿ: ಕೆ.ಎಮ್,ಆರ್–301, ಇಂಡಾಫ್ 5,7 ಮತ್ತು 9, ಹಾಗು ಎಂ.ಎಲ್–365 ರಾಗಿ ತಳಿಗಳನ್ನು ಬಿತ್ತನೆ ಮಾಡಬಹುದು<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಅವರೆ–ಎಚ್.ಎ–3 ಮತ್ತು 4,ಸೂರ್ಯಕಾಂತಿ: ಕೆ.ಬಿ.ಎಸ್.ಹೆಚ್–1,41,42,44 ಮತ್ತು 53, ಹುರುಳಿ: ಪಿ.ಎಚ್.ಜಿ–9 ಮತ್ತು ಕೆ.ಬಿ.ಎಚ್–1, ಹುಚ್ಚೆಳ್ಳು ತಳಿಗಳನ್ನು ಬಿತ್ತನೆ/ನಾಟಿ ಮಾಡುವುದು. |
| ಮಾವು | | 1. ಸೆಪ್ಟೆಂಬರ್ ತಿಂಗಳಿನಲ್ಲಿ ಪ್ಯಾಕ್ಲೋಬುಟ್ರಜೋಲ್ 5 ಗ್ರಾಂ. ಪ್ರತಿ ಗಿಡಕ್ಕೆ ಸಿಂಪಡಿಸುವುದರಿಂದ ಮಾವಿನ ಗಿಡದ ಎಲ್ಲಾ ಭಾಗಗಳಲ್ಲೂ ಸಮನಾದ ಹೂವುಗಳು ಬಿಡಲು ತುಂಬಾ ಅನುಕೂಲ.<br>2. ಮಾವಿನ ತೋಪುಗಳಲ್ಲಿ ಒಣ ರೆಂಬೆ ಕೊಂಬೆಗಳನ್ನು ಕತ್ತರಿಸಿ ಹೊರಹಾಕಿ.<br>3. ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು. |

| | |
|---|---|
| **ರೇಷ್ಮೆ ಸಾಕಾಣಿಕೆ** | 1. ರೇಷ್ಮೆ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. |
| **ಹೈನುಗಾರಿಕೆ** | |
| | |
| **ಪಶುಸಂಗೋಪನೆ** | ➢ ಬಿಸಿಲು, ಮಳೆ ಮತ್ತು ಬೀಸು ಗಾಳಿಯನ್ನು ತಪ್ಪಿಸಲು ಕೋಳಿ ಮನೆಯನ್ನು ಪೂರ್ವ–ಪಶ್ಚಿಮಕ್ಕೆ ಉದ್ದುದ್ದವಾಗಿ ಆಯಾಕಾರವಾಗಿ ಕಟ್ಟುವುದು ಸೂಕ್ತ.<br>➢ ಉತ್ತಮ ಮಳೆ ಮತ್ತು ತೇವಾಂಶದ ಆಧಾರದಲ್ಲಿ ಯತೇಚ್ಚ ಹುಲ್ಲು ಮತ್ತು ಮೇವು ಲಭ್ಯವಿರುವುದರಿಂದ ಹೈನುಗಾರಿಕೆ ಬಲವರ್ಧನೆಗೆ ತುಂಬಾ ಸಹಕಾರಿಯಾಗುತ್ತದೆ.<br>➢ ಹಿಂಡಿ ಬೂಸವನ್ನು ಮೂರು–ನಾಲ್ಕು ಭಾಗ ಮಾಡಿ ಹಗಲಿನಲ್ಲಿ ಸಂಜೆ ಮತ್ತು ರಾತ್ರಿಯಲ್ಲಿ ತಿನ್ನಿಸುವುದು ಉತ್ತಮ.<br>➢ ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಫ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.